ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ನಟರಾಜನ್

ಯಶವಂತ್ ಕುಮಾರ್ ವಿರುದ್ಧ-ಶಾಂತ ಕುಮಾರ್ ಎನ್.

ಕ್ರಿಮಿನಲ್ ಅಪೀಲುಸಂಖ್ಯೆ: 939/2010, ದಿನಾಂಕ 7 ನೇ ಆಗಸ್ಟ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಕೆ. ನಟರಾಜನ್:

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ತ್ವರಿತಗತಿ ನ್ಯಾಯಾಲಯ -IV, ಬೆಂಗಳೂರು (ಸಂಕ್ಷಿಪ್ತತತೆಗಾಗಿ ಇನ್ನು ಮುಂದೆ ' ಪ್ರಥಮ ಅಪೀಲು ನ್ಯಾಯಾಲಯ ' ಎಂದು ಉಲ್ಲೇಖಿಸಲಾಗುವುದು), ಕ್ರಿಮಿನಲ್ ಅಪೀಲುಸಂಖ್ಯೆ: 500/2009 ರಲ್ಲಿದಿನಾಂಕ: 5.5.2010 ರಂದು ನೀಡಿದ ತೀರ್ಪು ಮತ್ತು ಹೊರಡಿಸಿದ ಖುಲಾಸೆ ಆದೇಶದಿಂದ ಬಾಧಿತನಾದ ಅಪೀಲುದಾರ/ಕ್ಲೇಮುದಾರನು ಈ ಅಪೀಲನ್ನು ಸಲ್ಲಿಸಿರುತ್ತಾನೆ.

2. ಅಧಿವಿಚಾರಣಾ ನ್ಯಾಯಾಲಯದ ಮುಂದೆ ಅಪೀಲುದಾರನು ಫಿರ್ಯಾದುದಾರನಾಗಿದ್ದು, ಪ್ರತ್ಯಪೀಲುದಾರನು ಆಪಾದಿತನಾಗಿರುತ್ತಾನೆ.ಅನುಕೂಲದ ದೃಷ್ಟಿಯಿಂದ, ಪಕ್ಷಕಾರರುಗಳ ಶ್ರೇಣಿಯನ್ನು ಉಳಿಸಿಕೊಳ್ಳಲಾಗಿದೆ.

3. ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಆರ್. ಮಹೇಶ್ರುವರ ವಾದವನ್ನು ಮತ್ತು ಪ್ರತ್ಯಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ಆರ್. ಡಿ. ಪಂಚಮ್ರುವರ ವಾದವನ್ನು ನಾವು ಆಲಿಸಿದ್ದೇವೆ.

4. ಅಧಿವಿಚಾರಣಾ ನ್ಯಾಯಾಲಯದ ಮುಂದಿರುವ ಫಿರ್ಯಾದುದಾರರ ಮೊಕದ್ದಮೆಯ ಸಂಕ್ಷಿಪ್ತ ಅಂಶಗಳು ಏನೆಂದರೆ:

ಫಿರ್ಯಾದುದಾರ ಮತ್ತು ಆಪಾದಿತನು ಒಬ್ಬರಿಗೊಬ್ಬರು ಪರಿಚಿತರಾಗಿದ್ದರು.ಆಪಾದಿತನು ಫಿರ್ಯಾದುದಾರನಿಂದ ಏಪ್ರಿಲ್ ತಿಂಗಳಿನಲ್ಲಿ 1,00,000/- ರೂ.ಗಳ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ತೀರಿಸಲು ಆಪಾದಿತನು ಫಿರ್ಯಾದುದಾರನ ಹೆಸರಿಗೆದಿನಾಂಕ: 20.10.2008 ರ ಚೆಕ್ಕನ್ನು (ನಿಶಾನೆ ಪಿ .2) ನೀಡಿರುತ್ತಾನೆ.ಫಿರ್ಯಾದುದಾರನು ಆ ಚೆಕ್ಕನ್ನು ತನ್ನ ಬ್ಯಾಂಕಿನಲ್ಲಿ ಹಾಜರುಪಡಿಸಿದಾಗ, ಸದರಿ ಚೆಕ್ಕನ್ನು ಸಾಕಷ್ಟು ಹಣವಿಲ್ಲ ' ಎಂಬ ಹಿಂಬರಹದೊಂದಿಗೆ (ನಿಶಾನೆ ಪಿ .3) ನಿರಾಕರಿಸಲಾಗಿರುತ್ತದೆ.ಫಿರ್ಯಾದುದಾರನು ಆಪಾದಿತನಿಗೆ ಆರ್.ಪಿ.ಎ.ಡಿ ಮತ್ತು ಅಂಚೆ ಪ್ರಮಾಣ ಪತ್ರದ (ಯು.ಪಿ.ಸಿ) ಮೂಲಕ ಕಾನೂನು ನೋಟೀಸನ್ನು ನೀಡಿರುತ್ತಾನೆ ಮತ್ತು ಅದನ್ನೇ ಆಪಾದಿತನಿಗೂ ಜಾರಿ ಮಾಡಿರುತ್ತಾನೆ.ಆಪಾದಿತನು ಸಾಲದ ಮೊತ್ತವನ್ನು ಮರು ಪಾವತಿಯೂ ಮಾಡಿರುವುದಿಲ್ಲ ಅಥವಾ ಯಾವುದೇ ಪ್ರತ್ಯುತ್ತರವನ್ನೂ ನೀಡಿರುವುದಿಲ್ಲ.ಆದ್ದರಿಂದ, ಫಿರ್ಯಾದುದಾರನು, ದಂಡ ಪ್ರಕ್ರಿಯಾ ಸಂಹಿತೆ, 1973 ರ (ಸಂಕ್ಷಿಪ್ತತೆಗಾಗಿ ಇನ್ನು ಮುಂದೆ ' ಸಿಆರ್‌ಪಿಸಿ ' ಎಂದು ಉಲ್ಲೇಖಿಸಲಾಗುವುದು) 200 ನೇ ಪ್ರಕರಣದ ಅಡಿಯಲ್ಲಿ, 16 ನೇ ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್, ಬೆಂಗಳೂರು, (ಸಂಕ್ಷಿಪ್ತತೆಗಾಗಿ ಇನ್ನು ಮುಂದೆ ' ಅಧಿವಿಚಾರಣಾ ನ್ಯಾಯಾಲಯ ' ಎಂದು ಉಲ್ಲೇಖಿಸಲಾಗುವುದು) ಇಲ್ಲಿ ದೂರನ್ನು ಸಿ.ಸಿ. ಸಂಖ್ಯೆ 1375/2009 ರಲ್ಲಿ ದಾಖಲು ಮಾಡಿರುತ್ತಾನೆ.

ಮಾನ್ಯ ಮ್ಯಾಜಿಸ್ಟ್ರೇಟರು, ಇದರ ಬಗ್ಗೆ ತಿಳಿದ ನಂತರ, ಆಪಾದಿತನ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿಕೊಂಡರು ಮತ್ತು ಆತನಿಗೆ ನ್ಯಾಯಾಲಯದ ಮುಂದೆ ಹಾಜರಾಗಲು ಆದೇಶ ನೀಡಿದರು.ಆಪಾದಿತನು ತಾನು ತಪ್ಪಿತಸ್ತನಲ್ಲವೆಂದು ವಾದಿಸಿದನು ಮತ್ತು ವಿಚಾರಣೆಗೆ ಕ್ಲೇಮು ಮಾಡಿದನು.ಫಿರ್ಯಾದುದಾರನು ಪ್ರಾ.ಸಾ .1 ಆಗಿ ವಿಚಾರಣೆಗೊಳಪಟ್ಟನು ಮತ್ತು ಏಳು ದಾಖಲೆಗಳನ್ನು ಗುರುತು ಮಾಡಿಸಿದನು.ಪ್ರಾ.ಸಾ .1 ರ ಪಾಟೀ ಸವಾಲನ್ನು ಹೊರತುಪಡಿಸಿ, ಆಪಾದಿತನು ಯಾವುದೇ ಸಾಕ್ಷ್ಯವನ್ನು ನೀಡಿರುವುದಿಲ್ಲ.

ಅಧಿವಿಚಾರಣಾ ನ್ಯಾಯಾಲಯವು, ಅಭಿಲೇಖನದಲ್ಲಿನ ಸಾಕ್ಷ್ಯಗಳನ್ನು ಪರಿಗಣಿಸಿದ ನಂತರ, ಆಪಾದಿತನನ್ನು ದೋಷಿ ಎಂದು ನಿರ್ಣಯಿಸಿ 1,10,000/ ರೂ.ಗಳ ಜುಲ್ಮಾನೆಯನ್ನು ಪಾವತಿ ಮಾಡುವ ಶಿಕ್ಷೆ ವಿಧಿಸಿದರು ಮತ್ತು

ಜುಲ್ಮಾನೆ ಪಾವತಿಸಲು ತಪ್ಪಿದ್ದಲ್ಲಿ ಆಪಾದಿತನು ಒಂದು ವರ್ಷಗಳ ಕಾಲ ಅನುಭವಿಸಬೇಕು ಮತ್ತು ಸದರಿ ಮೊತ್ತದಲ್ಲಿ 1,06,000/- ರೂ.ಗಳನ್ನು ಪರಿಹಾರವಾಗಿ ಫಿರ್ಯಾದುದಾರನಿಗೆ ನೀಡಬೇಕೆಂದು ಆಪಾದಿತನಿಗೆ ನಿರ್ದೇಶಿಸಲಾಯಿತು.

ಅಧಿವಿಚಾರಣಾ ನ್ಯಾಯಾಲಯ ನೀಡಿದ ದೋಷಪೂರಿತ ತೀರ್ಪು ಮತ್ತು ಶಿಕ್ಷೆಯಿಂದ ಬಾಧಿತನಾದ ಆಪಾದಿತನು, ಮೊದಲ ಅಪೀಲು ನ್ಯಾಯಾಲಯದ ಮುಂದೆ ಕ್ರಿಮಿನಲ್ ಅಪೀಲುಸಂಖ್ಯೆ: 500/2009 ನ್ನು ಸಲ್ಲಿಸಿರುತ್ತಾನೆ.ಎರಡು ಪಕ್ಷಕಾರರ ಪರ ವಾದಗಳನ್ನು ಆಲಿಸಿದ ತರುವಾಯ, ಮೊದಲ ಅಪೀಲು ನ್ಯಾಯಾಲಯವು ದಿನಾಂಕ 5.5.2010 ರ ತನ್ನ ತೀರ್ಪಿನ ಮೂಲಕ ಆಪಾದಿತನು ಸಲ್ಲಿಸಿದ ಅರ್ಜಿಯನ್ನು ಅಂಗೀಕರಿಸಿ, ಅಧಿವಿಚಾರಣಾ ನ್ಯಾಯಾಲಯವುದಿನಾಂಕ: 23.05.2009 ರಂದು ನೀಡಿದ ದೋಷಪೂರಿತ ತೀರ್ಪು ಮತ್ತು ಶಿಕ್ಷೆಯನ್ನು ರದ್ದುಗೊಳಿಸಿರುತ್ತದೆ.

ತೀರ್ಪು ವಿಪರ್ಯಯವಾದ್ದರಿಂದ ಮತ್ತು ಆಪಾದಿತನನ್ನು ಖುಲಾಸೆ ಗೊಳಿಸಿದ್ದರಿಂದ ಬಾಧಿತನಾದ ಫಿರ್ಯಾದುದಾರನು ಈ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ.

5. ಅಪೀಲುದಾರ/ಕ್ಲೇಮುದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದ ಮಂಡಿಸುವುದೇನೆಂದರೆ, ಆಪಾದಿತ ಮತ್ತು ಫಿರ್ಯಾದುದಾರನು ಒಬ್ಬರಿಗೊಬ್ಬರು ಪರಿಚಿತರಾಗಿದ್ದರು.ಆಪಾದಿತನು ಚಲನಚಿತ್ರ ನಿರ್ಮಾಪಕನಾಗಿದ್ದು, ಚಲನಚಿತ್ರವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ಆತನು ಫಿರ್ಯಾದುದಾರನಿಂದ ಹಣ ಪಡೆಯಲು ಮುಂದಾದನು ಮತ್ತು ಫಿರ್ಯಾದುದಾರನು 2008 ರ ಏಪ್ರಿಲ್ನಲ್ಲಿ ಆಪಾದಿತನಿಗೆ 1,00,000/- ರೂ.ಗಳನ್ನು ನೀಡಿದನು.ಆಪಾದಿತನು ಆ ಹಣವನ್ನು 6 ತಿಂಗಳೊಳಗಾಗಿ ಮರು ಪಾವತಿ ಮಾಡುವ ಭರವಸೆಯನ್ನು ಫಿರ್ಯಾದುದಾರನಿಗೆ ನೀಡಿದ್ದನು.ಆದರೆ ಮರುಪಾವತಿ ಮಾಡಲು ಆತನು ವಿಫಲನಾದನು.ಫಿರ್ಯಾದುದಾರನು 2008 ರ ಅಕ್ಟೋಬರ್ನಲ್ಲಿ ಆಪಾದಿತನಿಗೆ ಹಣವನ್ನು ಕೇಳಿದಾಗ, ಆಪಾದಿತನು 1,00,000/- ರೂ.ಗಳ ಚೆಕ್ಕನ್ನು ನೀಡಿ, ಚೆಕ್ಕನ್ನು ಬ್ಯಾಂಕಿಗೆ ಹಾಕಿದಾಗ ಅದು ನಗದಾಗುತ್ತದೆ ಎಂದು ಭರವಸೆಯನ್ನು ನೀಡಿದನು.ಆದರೆ ಫಿರ್ಯಾದುದಾರನ ಮಹದಾಶ್ಚರ್ಯಕ್ಕೆ ಚೆಕ್ಕನ್ನು ಬ್ಯಾಂಕಿಗೆ ಹಾಕಿದಾಗ, ' ಸಾಕಷ್ಟು ಹಣವಿಲ್ಲ ' ಎಂಬ ಹಿಂಬರಹದೊಂದಿಗೆ ಅದನ್ನು ನಿರಾಕರಿಸಲಾಗಿರುತ್ತದೆ.ಆಪಾದಿತನು ಫಿರ್ಯಾದುದಾರನಿಂದ ಕಾನೂನು ನೋಟೀಸನ್ನು ಪಡೆದುಕೊಂಡರೂ ಸಹ, ಅದಕ್ಕೆ ಮರು ಉತ್ತರ ನೀಡುವುದಾಗಲಿ, ಸಾಲದ ಮೊತ್ತವನ್ನು ಮರು ಪಾವತಿ ಮಾಡುವುದಾಗಲಿ ಆಪಾದಿತನು ಮಾಡಿರುವುದಿಲ್ಲ.ಆದ್ದರಿಂದ, ಫಿರ್ಯಾದುದಾರನು ಮ್ಯಾಜಿಸ್ಟ್ರೇ ಟ್ ಮು ಂ ದೆ ಒ ಂ ದು ಖಾಸಗಿ ದೂರನ್ನು ದಾಖಲಿಸಲು ಒತ್ತಾಯಕ್ಕೊಳಪಟ್ಟನು ಎಂದು ಮಾನ್ಯ ನ್ಯಾಯವಾದಿಗಳು ವಾದ ಮಂಡಿಸಿದ್ದಾರೆ.ಮಾನ್ಯ ನ್ಯಾಯವಾದಿಗಳು ಮುಂದುವರಿದು ವಾದ ಮಂಡಿಸುವುದೇನೆಂದರೆ, ಅಭಿಲೇಖನದಲ್ಲಿನ ಸಾಕ್ಷ್ಯಗಳ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು ಆಪಾದಿತನನ್ನು ಸರಿಯಾಗಿಯೇ ದೋಷಿ ಎಂದು ನಿರ್ಣಯಿಸಿರುತ್ತದೆ.ಆದರೆ ಮೊದಲ ಅಪೀಲು ನ್ಯಾಯಾಲಯವು, ಫಿರ್ಯಾದುದಾರನು ಆದಾಯ ಮೂಲವನ್ನು ತೋರಿಸಿಲ್ಲ ಮತ್ತು ಆತನು ಆಟೋ ಚಾಲಕನಾಗಿದ್ದು ಆತನಿಗೆ ಆಪಾದಿತನಿಗೆ 1,00,000/- ರೂ.ಗಳನ್ನು ನೀಡುವ ಸಾಮರ್ಥ್ಯವಿರುವುದಿಲ್ಲ ಎಂಬ ಆಧಾರಗಳ ಮೇಲೆ ಆಪಾದಿತನನ್ನು ಖುಲಾಸೆಗೊಳಿಸಿ ತಪ್ಪೆಸಗಿರುತ್ತದೆ.ಫಿರ್ಯಾದುದಾರನು ತನ್ನ ಉಳಿತಾಯದ ಹಣ ಮತ್ತು ತನ್ನ ತಂದೆಯ ನಿವೃತ್ತಿ ಹಣದಿಂದ ಆಪಾದಿತನಿಗೆ ಸದರಿ ಮೊತ್ತವನ್ನು ನೀಡಿರುವುದಾಗಿ ಹೇಳಿರುತ್ತಾನೆ.ಆದರೆ, ಮೊದಲ ಅಪೀಲು ನ್ಯಾಯಾಲಯವು ಇದನ್ನು ನಂಬಿಲ್ಲದಿರುವುದು ಸೂಕ್ತವಾಗಿರುವುದಿಲ್ಲ.ಅಪೀಲುದಾರನ ಪರ ಲಭ್ಯವಿರುವ ಪೂರ್ವಭಾವನೆಯನ್ನು, ಆಪಾದಿತನು ಸಾಕ್ಷಿ ಕಟಕಟಗೆ ಬಂದು ಅಲ್ಲಗಳೆದಿರುವುದಿಲ್ಲ.ಫಿರ್ಯಾದುದಾರನಿಂದ ಚೆಕ್ಕನ್ನು ಹೊರತುಪಡಿಸಿ, ಇನ್ನಿತರ ಯಾವುದೇ ದಸ್ತಾವೇಜುಗಳನ್ನು ಹೊಂದಿಲ್ಲ ಎಂಬುದು ದೂರನ್ನು ವಜಾಗೊಳಿಸಲು ಆಧಾರವಾಗಿರುವುದಿಲ್ಲ.ಆದ್ದರಿಂದ, ಮಾನ್ಯ ನ್ಯಾಯವಾದಿಗಳು, ಮೊದಲ ಅಪೀಲು ನ್ಯಾಯಾಲಯ ನೀಡಿದ ತೀರ್ಪನ್ನು ರದ್ದುಪಡಿಸಿ, ಅಧಿವಿಚಾರಣಾ ನ್ಯಾಯಾಲಯವು ನೀಡಿದ ದೋಷಪೂರಿತ ತೀರ್ಪು ಮತ್ತು ಶಿಕ್ಷೆಯನ್ನು ದೃಢೀಕರಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.

6. ಇದಕ್ಕೆ ವಿರುದ್ಧವಾಗಿ, ಆಪಾದಿತ ಪ್ರತ್ಯರ್ಜಿದಾರನ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಮೊದಲ ಅಪೀಲು ನ್ಯಾಯಾಲಯ ಹೊರಡಿಸಿದ ಖುಲಾಸೆಯ ತೀರ್ಪನ್ನು ಬೆಂಬಲಿಸಿದ್ದು, ಪಾಟಿ ಸವಾಲಿನ ಸಂದರ್ಭದಲ್ಲಿ ಪೂರ್ವ ಭಾವನೆಯನ್ನು ಅಲ್ಲಗಳೆಯಲಾಗಿದ್ದು, ಪೂರ್ವಭಾವನೆಯನ್ನು ಅಲ್ಲಗಳೆಯಲು ಆಪಾದಿತನು ಸಾಕ್ಷಿಯ ಕಟಕಟೆಗೆ ಬರುವ ಅವಶ್ಯಕತೆಯಿರುವುದಿಲ್ಲವೆಂದು ವಾದ ಮಂಡಿಸಿದ್ದಾರೆ.ಫಿರ್ಯಾದುದಾರನಿಗೆ ಆಪಾದಿತನಿಗೆ ಅಷ್ಟು ಭಾರೀ ಮೊತ್ತವನ್ನು ನೀಡಲು ಸಾಮರ್ಥ್ಯವಿಲ್ಲದಿರುವಾಗ ಅಥವಾ ಯಾವುದೇ ಆದಾಯ ಮೂಲವಿಲ್ಲದಿರುವಾಗ ಮತ್ತು ಆತನು ಆಟೋರಿಕ್ಷಾ ಚಾಲಕನಾಗಿ ದಿನಕ್ಕೆ 350/ರಿಂದ 400 ರೂಪಾಯಿಗಳನ್ನು ಸಂಪಾದಿಸುತ್ತಿದ್ದು ಅದರಲ್ಲಿ ದಿನಕ್ಕೆ 150/ರೂಪಾಯಿಗಳನ್ನು ಆಟೋ ರಿಕ್ಷಾ ಮಾಲೀಕನಿಗೆ ನೀಡಬೇಕಾಗಿದ್ದು ಮತ್ತು ಆತನು ಆಟೋ ರಿಕ್ಷಾ ಖರೀದಿಸಲು ಅಸಮರ್ಥನಾಗಿರುವಾಗ, 1,00,000/-ರೂಪಾಯಿಗಳನ್ನು ಆಪಾದಿತನಿಗೆ ನೀಡುವ ಪ್ರಶ್ನೆಯೇ ನಂಬಲಾರ್ಹವಾಗಿರುತ್ತದೆ.ಮಾನ್ಯ ನ್ಯಾಯವಾದಿಗಳು ವಾದಿಸುವುದೇನೆಂದರೆ, ಫಿರ್ಯಾದುದಾರನು ಆಪಾದಿತನಿಗೆ ಯಾವ ದಿನಾಂಕದಂದು ಹಣ ನೀಡಿದನು ಎಂಬುದರ ಬಗ್ಗೆ ಹೇಳಲು ಸಾಧ್ಯವಿರುವುದಿಲ್ಲ.ಪಾಟೀ ಸವಾಲಿನಲ್ಲಿ ಆತನು ಆಪಾದಿತನಿಗೆ 2008 ರ ಏಪ್ರಿಲ್‌ನಲ್ಲಿ ಹಣವನ್ನು ನೀಡಿದನು ಎಂದು ಹೇಳಿದ್ದರೂ ಸಹಾ, ಯಾವುದೇ ನಿರ್ದಿಷ್ಟ ದಿನಾಂಕವನ್ನು ಉಲ್ಲೇಖಿಸಿರುವುದಿಲ್ಲ ಮತ್ತು ಒಂದು ಬಾರಿ ತನ್ನ ಮನೆಯಲ್ಲಿ ಆಪಾದಿತನಿಗೆ ಹಣವನ್ನು ನೀಡಲಾಯಿತು ಎಂದು ಹೇಳಿದರೆ ಮತ್ತೊಂದು ಬಾರಿ ಆಪಾದಿತನ ಮನೆಗೆ ಹೋಗಿ ಹಣ ನೀಡಿರುವುದಾಗಿ ಹೇಳುತ್ತಾನೆ ಮತ್ತು ಆದಾಯದ ಮೂಲವನ್ನು ತೋರಿಸಲು ಮತ್ತು ಹಣವನ್ನು ನೀಡಲು ಫಿರ್ಯಾದುದಾರನ ಸಾಮರ್ಥ್ಯವನ್ನು ತೋರಿಸಲು ಯಾವುದೇ ದಸ್ತಾವೇಜುಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ.ಫಿರ್ಯಾದುದಾರನು ತಾನೊಬ್ಬ ಆದಾಯ ತೆರಿಗೆ ಕರದಾತನೆಂದು ಹೇಳಿದ್ದರೂ ಸಹ, ಸದರಿ ಮೊತ್ತವನ್ನು ಆದಾಯ ತೆರಿಗೆ ರಿಟನ್ಸ್‌ರ್ನಲ್ಲಿ ಘೋಷಿಸಿರುವುದಿಲ್ಲ.ಆಪಾದಿತನು ಅನಿಲ್ ಎಂಬಾತನಿಗೆ ತಾನು ಚೆಕ್ಕನ್ನು ನೀಡಿದ್ದು ಅದನ್ನು ಹಿಂಪಡೆದಿದ್ದನು ಮತ್ತು ಅದು ಕಳುವಾಗಿತ್ತು ಮತ್ತು ಅದನ್ನು ಫಿರ್ಯಾದುದಾರನು ದುರ್ಬಳಕೆ ಮಾಡಿಕೊಂಡಿದ್ದಾನೆ ಎಂದು ಪ್ರತಿವಾದಿಸಿದ್ದಾನೆ.ಆಪಾದಿತನ ವಾದವನ್ನು ಮೊದಲ ಅಪೀಲು ನ್ಯಾಯಾಲಯವು ಅಂಗೀಕರಿಸಿರುತ್ತದೆ ಮತ್ತು ಅಧಿವಿಚಾರಣಾ ನ್ಯಾಯಾಲಯವು ತೀರ್ಪನ್ನು ಸೂಕ್ತವಾಗಿಯೇ ಹಿಂದು ಮುಂದು ಮಾಡಿರುತ್ತದೆ.ಫಿರ್ಯಾದುದಾರನಿಗೆ ಸದರಿ ಮೊತ್ತವನ್ನು ಪಾವತಿಸಲು ಮತ್ತು ಆದಾಯದ ಮೂಲವನ್ನು ತೋರಿಸಲು ಸಾಮರ್ಥ್ಯವಿಲ್ಲದಿರುವಾಗ ಮತ್ತು ಆಪಾದಿತನು ಕಾನೂನಾತ್ಮಕವಾಗಿ ಸಾಲವನ್ನು ಮರು ಪಾವತಿ ಮಾಡುವ ಹೊಣೆಗಾರಿಕೆಯನ್ನು ಹೊಂದಿದ್ದಾನೆ ಎಂದು ತೋರಿಸಲು ವಿಫಲನಾಗಿರುವಾಗ, ಆಪಾದಿತನನ್ನು ಸಾಕ್ಷಿಯ ಕಟಕಟೆಗೆ ಕರೆಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಆತನ ವಾದಕ್ಕೆ ಬೆಂಬಲವಾಗಿ, ಪ್ರತ್ಯರ್ಜಿದಾರ/ಆಪಾದಿತನ ಪರ ಮಾನ್ಯ ನ್ಯಾಯವಾದಿಗಳು, ವರದಿಯಾದ ಕೆ. ಸುಬ್ರಮಣಿ ವಿರುದ್ದ-ಕೆ.ದಾಮೋದರ ನಾಯ್ಡು-(2015) ಎಸ್ಸಿಸಿ 99, ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಮೇಲೆ 9 ಚ ಅವಲಂಬಿತರಾಗಿದ್ದು, ಮಾನ್ಯ ನ್ಯಾಯವಾದಿಗಳ ಅಪೀಲನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.

7. ಎರಡೂ ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದ ನಂತರ ಮತ್ತು ಸಾಕ್ಷ್ಯಗಳನ್ನು ಅವಗಾಹಿಸಿದ ನಂತರ, ನಮ್ಮ ಪರಿಗಣನೆಗೆಂದು ಉದ್ಭವಿಸಿದ ಅಂಶಗಳೆಂದರೆ:

(i) ಅಧಿವಿಚಾರಣಾ ನ್ಯಾಯಾಲಯವು ಮಧ್ಯಸ್ಥಿಕೆಯನ್ನು ಕೋರುವ ದೋಷ ಪೂರಿತ ತೀರ್ಪು ಮತ್ತು ಶಿಕ್ಷೆಯನ್ನು ಮೊದಲ ಅಪೀಲು ನ್ಯಾಯಾಲಯವು ಹಿಂದು ಮುಂದು ಮಾಡಿ ತಪ್ಪೆಸಗಿದೆಯೇ?

(ii) ಆದೇಶ ಏನು?

8. ಫಿರ್ಯಾದುದಾರನ ವಾದವೇನೆಂದರೆ, ಆಪಾದಿತ ಮತ್ತು ಫಿರ್ಯಾದುದಾರರು ಒಬ್ಬರಿಗೊಬ್ಬರು ಪರಿಚಿತರಾಗಿದ್ದು, ಚಲನಚಿತ್ರ ನಿರ್ಮಾಪಕನಾಗಿದ್ದ ಆಪಾದಿತನು, ಆರು ತಿಂಗಳೊಳಗಾಗಿ ಸಾಲದ ಹಣವನ್ನು ಹಿಂತಿರುಗಿಸುವ ಭರವಸೆಯೊಂದಿಗೆ 2008 ರ ಏಪ್ರಿಲ್‌ನಲ್ಲಿ ಫಿರ್ಯಾದುದಾರನಿಂದ 1,00,000/- ರೂ.ಗಳ ಸಾಲವನ್ನು ಪಡೆದುಕೊಂಡಿರುತ್ತಾನೆ ಮತ್ತು 2008 ರ ಅಕ್ಟೋಬರ್ನ ಎರಡನೇ ವಾರದಲ್ಲಿ ಫಿರ್ಯಾದುದಾರನು ಸಾಲದ ಮೊತ್ತವನ್ನು ಹಿಂದಿರುಗಿಸು ಎಂದು ಆಪಾದಿತನನ್ನು ಸಂಪರ್ಕಿಸಿರುತ್ತಾನೆ ಮತ್ತು ಆಪಾದಿತನುದಿನಾಂಕ: 20.10.2008 ರಸಂಖ್ಯೆ: 115116 ಹೊಂದಿದ ಚೆಕ್ಕನ್ನು ಫಿರ್ಯಾದುದಾರನಿಗೆ ನೀಡಿರುತ್ತಾನೆ.ಚೆಕ್ಕನ್ನು ನಗದಾಗಿಸಲು ಬ್ಯಾಂಕಿಗೆ ಹಾಕಿದಾಗ,ದಿನಾಂಕ: 21.10.2008 ರಂದು ಅದು

ಬ್ಯಾಂಕಿನಿಂದ ನಿರಾಕರಣೆಗೊಂಡಿತು.ದಿನಾಂಕ: 04.11.2008 ರಂದು ಫಿರ್ಯಾದುದಾರನು ಆಪಾದಿತನಿಗೆ ಕಾನೂನು ನೋಟೀಸನ್ನು ನೀಡಿದನು.ಆಪಾದಿತನು ಈ ನೋಟೀಸಿಗೆ ಪ್ರತ್ಯುತ್ತರವನ್ನೂ ನೀಡಲಿಲ್ಲ ಅಥವಾ ಹಣವನ್ನೂ ಮರು ಪಾವತಿ ಮಾಡಲಿಲ್ಲ.ಆದ್ದರಿಂದ, ಫಿರ್ಯಾದುದಾರನು ಒಂದು ದೂರನ್ನು ದಾಖಲಿಸಿದನು.ಫಿರ್ಯಾದುದಾರನು, ತನ್ನನ್ನು ತಾನು ಪ್ರಾ.ಸಾ .1 ಎಂದು ವಿಚಾರಣೆಗೊಳಪಟ್ಟು, ಅದನ್ನೇ ಪುನರುಚ್ಚರಿಸಿರುತ್ತಾನೆ.

9. ಫಿರ್ಯಾದುದಾರನು, ತನ್ನ ವಾದಕ್ಕೆ ಬೆಂಬಲವಾಗಿ, ಏಳು ದಸ್ತಾವೇಜುಗಳನ್ನು ಗುರುತು ಮಾಡಿರುತ್ತಾನೆ.ನಿಶಾನೆ ಪಿ .1 ದೂರು ನಿಶಾನೆ ಪಿ .2-ಚೆಕ್ಕು, ನಿಶಾನೆ ಪಿ .3 ಬ್ಯಾಂಕಿನ ಹಿಂಬರಹ ನಿಶಾನೆ ಪಿ .4 ಕಾನೂನು ನೋಟೀಸಿನ ಪ್ರತಿ ನಿಶಾನೆ.ಪಿ .5 ಅಂಚೆ ರಸೀದಿ ನಿಶಾನೆ ಪಿ .6 ಆಪಾದಿತನು ನೋಟೀಸನ್ನು ಪಡೆದುಕೊಂಡಿದ್ದಾನೆ ಎಂದು ತೋರಿಸುವ ಅಂಚೆ ಪ್ರಮಾಣಪತ್ರದ ಅಡಿಯಲ್ಲಿನ ಸ್ವೀಕೃತಿ, ಫಿರ್ಯಾದುದಾರನು, ತನ್ನನ್ನು ತಾನು ಪ್ರಾ.ಸಾ.!ಎಂದು ವಿಚಾರಣೆಗೊಳಪಟ್ಟು, ದೂರಿನಲ್ಲಿ ಮಾಡಲಾದ ದೃಢೋಕ್ತಿಗಳನ್ನು ಪುನರುಚ್ಚರಿಸಿರುತ್ತಾನೆ.ಅಂಗೀಕೃತವಾಗಿ, ಪ್ರಾ.ಸಾ .1 ಫಿರ್ಯಾದುದಾರನ ಪಾಟೀ ಸವಾಲನ್ನು ಹೊರತುಪಡಿಸಿ, ಆಪಾದಿತನು ಸಾಕ್ಷಿಯ ಕಟಕಟೆಗೆ ಬಂದು ಯಾವುದೇ ಸಾಕ್ಷಿಯನ್ನು ನೀಡಿರುವುದಿಲ್ಲ ಮತ್ತು ಕಾನೂನು ನೋಟೀಸನ್ನು ಜಾರಿಮಾಡಿದ್ದರೂ ಸಹ, ಕಾನೂನು ನೋಟೀಸಿಗೆ ಯಾವುದೇ ಪ್ರತ್ಯುತ್ತರವನ್ನು ಆಪಾದಿತನು ನೀಡಿರುವುದಿಲ್ಲ.ಆದಾಗ್ಯೂ, ಪಾಟಿ ಸವಾಲಿನಲ್ಲಿ, ಆಪಾದಿತನು ತನ್ನ ನೆರೆಯವನಾಗಿದ್ದು, ವ್ಯವಹಾರ ನಡೆಯುವ ಕಳೆದ 10-12 ವರ್ಷಗಳಿಂದ ಇಬ್ಬರಿಗೂ ಪರಿಚಯವಿದೆಯೆಂದು ಮತ್ತು ತಾನು ಆಟೋ ರಿಕ್ಷಾ ಚಾಲಕ ಮತ್ತು ಆದಾಯ ತೆರಿಗೆ ಕರದಾತನೆಂದು ಫಿರ್ಯಾದುದಾರನು ಹೇಳಿಕೆ ನೀಡಿರುತ್ತಾನೆ.ಆದರೆ ಫಿರ್ಯಾದುದಾರನು, ತನ್ನ ಆದಾಯ ತೆರಿಗೆ ವಿವರಗಳಲ್ಲಿ ಆತನ ಆದಾಯ ಅಥವಾ ಆಪಾದಿತನಿಗೆ ಸಾಲ ನೀಡಿದರ ಬಗ್ಗೆ ಘೋಷಿಸಿಕೊಂಡಿರುವುದಿಲ್ಲ.ತಾನು ತಿಂಗಳಿಗೆ 20,000/- ರೂ.ಗಳ ಆದಾಯವನ್ನು ಹೊಂದಿದ್ದನ್ನು ಮತ್ತು ಸದರಿ ಮೊತ್ತವನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದು, ಬ್ಯಾಂಕ್ ಅಥವಾ ಇತರರಿಂದ ಪಡೆದಿರುವುದಿಲ್ಲವೆಂದು ಹೇಳಿಕೆ ನೀಡಿರುತ್ತಾನೆ.ಆಪಾದಿತನಿಗೆ ಸಾಲದ ಮೊತ್ತವನ್ನು ತನ್ನ ಮನೆಯಲ್ಲಿಯೇ ನೀಡಿದ್ದೇನೆ ಎಂದು ಮುಂದುವರಿದು ಹೇಳಿಕೆ ನೀಡುತ್ತಾನೆ ಮತ್ತು ತಕ್ಷಣವೇ ಮತ್ತೊಮ್ಮೆ ಹೇಳಿಕೆ ನೀಡುವುದೇನೆಂದರೆ, ಆತನು ಆಪಾದಿತನ ಮನೆಗೆ ಹೋಗಿ ಹಣವನ್ನು ನೀಡಿರುತ್ತೇನೆ ಎಂಬುದಾಗಿದೆ.ಹಣವನ್ನು ನೀಡುವ ಸಮಯದಲ್ಲಿ ಯಾರೂ ಹಾಜರಿರಲಿಲ್ಲ ಮತ್ತು 1,00,000/- ರೂ.ಗಳನ್ನು ಆಪಾದಿತನಿಗೆ ನೀಡುವಾಗ ಆತನಿಂದ ಯಾವುದೇ ಸ್ವೀಕೃತಿಯನ್ನು ಫಿರ್ಯಾದುದಾರನು ಪಡೆದುಕೊಂಡಿರುವುದಿಲ್ಲ.

10. ಫಿರ್ಯಾದುದಾರನು ನೀಡಿದ ಎಲ್ಲಾ ದಸ್ತಾವೇಜುಗಳ ಅವಗಾಹನೆಯ ನಂತರ, ಅದು ತೋರಿಸುವುದೇನೆಂದರೆ, 1,00,000/-ರೂಪಾಯಿಗಳನ್ನು ಆಪಾದಿತನಿಗೆ ನೀಡಿದ್ದಕ್ಕೆ ಸಂಬಂಧಿಸಿದಂತ ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿ ಆತನು ಯಾವುದೇ ಇತರ ದಸ್ತಾವೇಜುಗಳನ್ನು ಹೊಂದಿರುವುದಿಲ್ಲ.ಮುಂದುವರಿದು, ಆದಾಯ ತೆರಿಗೆ ಕರದಾತನಾಗಿರುವ ಫಿರ್ಯಾದುದಾರನು, ಆಪಾದಿತನಿಗೆ ನೀಡಿದ 1,00,000/ರೂಪಾಯಿಗಳನ್ನು ತನ್ನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಘೋಷಿಸಿರುವುದಿಲ್ಲ.ಮುಂದುವರಿದು, ಆಪಾದಿತನಿಗೆ ಯಾವ ದಿನಾಂಕದಂದು ಹಣವನ್ನು ನೀಡಿರುತ್ತೇನೆ ಎಂಬುದನ್ನು ಹೇಳಲಾಗುವುದಿಲ್ಲವೆಂದು ಆದರೆ ಏಪ್ರಿಲ್ ತಿಂಗಳಿನಲ್ಲಿಯೇ ನೀಡಿದ್ದೇನೆಂದು ಫಿರ್ಯಾದುದಾರನು ಪಾಟೀ-ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾನೆ. ಆಪಾದಿತನು ತನಗೆ 2008 ರ ನವೆಂಬರ್ 21 ಅಥವಾ 22 ರಂದು ಚೆಕ್ಕನ್ನು ನೀಡಿದನೆಂದು ಫಿರ್ಯಾದುದಾರನು ಪಾಟಿ ಸವಾಲಿನಲ್ಲಿ ಮುಂದುವರಿದು ಒಪ್ಪಿಕೊಂಡಿದ್ದು, ನಿಶಾನೆ ಪಿ .2 ಚೆಕ್ಕುದಿನಾಂಕ: 20.10.2008 ಎಂದು ತೋರಿಸುತ್ತದೆ ಮತ್ತು ಇದು ಅಭಿಲೇಖದಲ್ಲಿನ ಸಾಕ್ಷ್ಯವನ್ನು ಸುಳ್ಳಾಗಿಸುತ್ತದೆ.ಚೆಕ್ಕನ್ನು 2008 ರ ನವೆಂಬರ್ 21 ಅಥವಾ 22 ರಂದು ನೀಡಿದ್ದರೆ, 2008 ಅಕ್ಟೋಬರ್ ಎಂದು ಉಲ್ಲೇಖಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.ಅದರ ಹೊರತಾಗಿ, ಫಿರ್ಯಾದುದಾರನು ತಾನು ಆಟೋ ರಿಕ್ಷಾ ಚಾಲಕನಾಗಿ ದಿನಕ್ಕೆ 300-400 ರೂ.ಗಳನ್ನು ಸಂಪಾದಿಸುತ್ತಿದ್ದನು.ಆದರೆ ಆಟೋ ಚಲಾಯಿಸಲು ಆತನ ಬಳಿ ಚಾಲನಾ ಪರವಾನಗಿ ಇರುವುದಿಲ್ಲ ಮತ್ತು ಆತನು ಬರಿ ಬಾಡಿಗೆ ಆಟೋವನ್ನು ಹೊಂದಿದ್ದು ಆತನು ಆ ಆಟೋದ ಮಾಲೀಕನಿಗೆ ದಿನಕ್ಕೆ 150/- ರೂ.ಗಳನ್ನು ನೀಡುತ್ತಿದ್ದನು ಎಂದು ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುತ್ತಾನೆ.ಆತನು ಚಲಾಯಿಸುತ್ತಿದ್ದ ಆಟೋದ ನೋಂದಣಿ ಸಂಖ್ಯೆ ತನಗೆ ತಿಳಿದಿರುವುದಿಲ್ಲವೆಂದು ಮುಂದುವರಿದು ಹೇಳಿದ್ದು, ಫಿರ್ಯಾದುದಾರನು, ಈ ಒಪ್ಪಿಗೆಯು ಆತನು ನಿಜವಾಗಿಯೂ ಬಾಡಿಗೆಯ ಆಧಾರದ ಮೇಲೆ ಆಟೋರಿಕ್ಷಾ ಚಲಾಯಿಸುತ್ತಿದ್ದರೆ ಆ

ಆಟೋ ರಿಕ್ಷಾದ ನೋಂದಣಿ ಸಂಖ್ಯೆ ಮತ್ತು ಅದರ ಮಾಲೀಕರ ಹೆಸರನ್ನು ಹೇಳಬಹುದಿತ್ತೆಂಬುದನ್ನು ತೋರಿಸುತ್ತದೆ.ಅದನ್ನು ಹೊರತುಪಡಿಸಿ, ಆತನು 2008 ನೇ ಇಸವಿಯಲ್ಲಿ ತನ್ನದೇ ಆದ ಒಂದು ಸ್ವಂತ ಆಟೋವನ್ನು ಖರೀದಿಸಬಹುದಿತ್ತು ಮತ್ತು ಅದರ ಬೆಲೆಯು 1,00,000/ ರೂ.ಗಳಿಗಿಂತ ಹೆಚ್ಚಿರುತ್ತಿರಲಿಲ್ಲ.ಆದ್ದರಿಂದ, ಅಪೀಲುದಾರ/ಫಿರ್ಯಾದುದಾರನು ತನ್ನ ಮನೆಯಲ್ಲಿ 1,00,000/-ರೂಗಳನ್ನು ಹೊಂದಿದ್ದ ಎಂಬುದನ್ನು ಒಪ್ಪಲಾಗುವುದಿಲ್ಲ.ಸದರಿ ಮೊತ್ತವು ತನ್ನ ತಂದೆಗೆ ಸೇರಿದ್ದು ಮತ್ತು ಸದರಿ ಮೊತ್ತವನ್ನು ತನ್ನ ತಂದೆಯು ಅವರ ನಿವೃತ್ತಿ ಪ್ರಯೋಜನಗಳಿಂದ ಪಡೆದಿದ್ದರು ಎಂಬುದನ್ನು ತೋರಿಸಲು ಯಾವುದೇ ದಸ್ತಾವೇಜುಗಳಿರುವುದಿಲ್ಲ.ಫಿರ್ಯಾದುದಾರನು ಅಷ್ಟು ಹಣವನ್ನು ತನ್ನ ಬಳಿ ಹೊಂದಿದ್ದರೆ ಆತನು ಬೇರೆಯವರ ಬಳಿ ಬಾಡಿಗೆ ಆಟೋವನ್ನು ಚಲಾಯಿಸಲು ಹೋಗುವ ಬದಲು ತನ್ನದೇ ಆದ ಸ್ವಂತ ಆಟೋವನ್ನು ಖರೀದಿಸಬಹುದಿತ್ತು.ಅದನ್ನು ಹೊರತುಪಡಿಸಿ, ಆಪಾದಿತನಿಗೆ ಹಣವನ್ನು ನೀಡುವಾಗ ಆತನಿಂದ ಫಿರ್ಯಾದುದಾರನು ಯಾವುದೇ ರಶೀದಿ ಅಥವಾ ಸ್ವೀಕೃತಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಸಾಲ ನೀಡುವಾಗ ಯಾವುದೇ ಬಡ್ಡಿಯನ್ನೂ ಸಹ ಹಾಕಿರುವುದಿಲ್ಲವೆಂದೂ ಸಹ ಹೇಳಿದ್ದಾನೆ.ಆಪಾದಿತನು ಸಿನಿಮಾ ಮಾಡುವ ಉದ್ದೇಶದಿಂದ ಫಿರ್ಯಾದುದಾರನನ್ನು ಸಂಪರ್ಕಿಸಿದನು ಎಂಬ ಯಾವ ದೃಢಕ್ತಿಯನ್ನು ದೂರಿನಲ್ಲಿ ಮಾಡಲಾಗಿರುವುದಿಲ್ಲ ಮತ್ತು ಆತನು ಆಪಾದಿತನಿಗೆ ಕೈಸಾಲ ನೀಡಿದನು ಎಂಬುದನ್ನು ಮಾತ್ರ ಹೇಳಿರುತ್ತಾನೆ.ಫಿರ್ಯಾದುದಾರನ ಆದಾಯ ಮೂಲ ಮತ್ತು ಆತನಿಗೆ ಆಪಾದಿತನಿಗೆ 1,00,000/- ರೂ.ಗಳನ್ನು ನೀಡುವ ಸಾಮರ್ಥ್ಯ ಹೊಂದಿದ್ದನು ಎಂಬುದನ್ನು ತೋರಿಸಲು ಫಿರ್ಯಾದುದಾರನ ಕಡೆಯಿಂದ ಯಾವುದೇ ಸಹಾಯವಾಗುವ ದಸ್ತಾವೇಜುಗಳಿರುವುದಿಲ್ಲ ಮತ್ತು ತಾನೊಬ್ಬ ಆದಾಯ ತೆರಿಗೆ ಕರದಾತನಾಗಿ, ಸದರಿ ಆದಾಯವನ್ನು ಆದಾಯ ತೆರಿಗೆ ಪ್ರಾಧಿಕಾರದಲ್ಲಿ ಘೋಷಿಸಿರುವುದಿಲ್ಲ ಮತ್ತು ನ್ಯಾಯಾಲಯದಲ್ಲಿ ಯಾವುದೇ ದಸ್ತಾವೇಜುಗಳನ್ನು ಹಾಜರುಪಡಿಸಿರುವುದಿಲ್ಲ.ಅದನ್ನು ಹೊರತುಪಡಿಸಿ, ಆಪಾದಿತನಿಗೆ ಸಾಲ ನೀಡಲು ತನ್ನ ಸ್ವಾಧೀನದಲ್ಲಿ ಹಣವಿತ್ತೆಂದು ತೋರಿಸಲು ಆತನು ಯಾವುದೇ ದಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ.ಆದ್ದರಿಂದ, ಆಪಾದಿತನು ತನ್ನಿಂದ ಹಣ ಪಡೆದನು ಮತ್ತು ಆ ಮೊತ್ತವನ್ನು ತೀರಿಸಲು ಆತನು ಅಸಮರ್ಥನಾಗಿದ್ದನು ಎಂಬ ಫಿರ್ಯಾದುದಾರನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

11. ಅದನ್ನು ಹೊರತುಪಡಿಸಿ, ಆಪಾದಿತನು 2008 ರ ನವೆಂಬರ್‌ನಲ್ಲಿ ಚೆಕ್ಕನ್ನು ನೀಡಿದನು ಎಂದು ಫಿರ್ಯಾದುದಾರನು ಪಾಟಿ ಸವಾಲಿನಲ್ಲಿ ಹೇಳಿರುತ್ತಾರೆ.ಆದರೆ ಚೆಕ್ಕಿನ ದಿನಾಂಕವು 2008 ಅಕ್ಟೋಬರ್ ಆಗಿರುತ್ತದೆ.ಪಾಟಿ ಸವಾಲಿನಲ್ಲಿ ಮೌಖಿಕ ಸಾಕ್ಷಿ ಎ ಮತ್ತು ದಸ್ತಾವೇಜಿಯ ಸಾಕ್ಷಿಯ ನಡುವೆ ಸ್ಪಷ್ಟ ವಿರೋಧಾಭಾಸವಿರುತ್ತದೆ.ಇದಕ್ಕೆ ಸಂಬಂಧಿಸಿದಂತೆ, ಆಪಾದಿತನ ಪರ ಮಾನ್ಯ ನ್ಯಾಯವಾದಿಗಳು ಕೆ. ಸುಬ್ರಮಣಿ ವಿರುದ್ಧ ಕೆ ದಾಮೋದರ್ ನಾಯ್ಡು ಪ್ರಕರಣದಲ್ಲಿ (ಮೇಲಿನ) ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪಿನ ಮೇಲೆ ಅವಲಂಬಿತರಾಗಿದ್ದು, ಇದರಲ್ಲಿನ 9 ನೇ ಪ್ಯಾರಾದಲ್ಲಿ ಈ ಕೆಳಕಂಡಂತೆ ಅಭಿಪ್ರಾಯಪಟ್ಟಿರುತ್ತದೆ:

9. ಪ್ರಸ್ತುತ ಮೊಕದ್ದಮೆಯಲ್ಲಿ, ಫಿರ್ಯಾದುದಾರ ಮತ್ತು ಆಪಾದಿತನು, ಸರ್ಕಾರಿ ಕಾಲೇಜಿನಲ್ಲಿ, ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಮತ್ತು ಹೇಳಲಾದ ಸಾಲದ ಮೊತ್ತವಾದ 14 ಲಕ್ಷ ರೂಪಾಯಿಗಳನ್ನು ನಗದು ರೂಪವಾಗಿ ನೀಡಲಾಗಿದೆ ಎಂದು ಕ್ಲೇಮು ಮಾಡಲಾಗಿರುವುದು ವಿವಾದಕ್ಕೀಡಾಗಿರುತ್ತದೆ.ಸರ್ಕಾರಿ ನೌಕರರ ನಿಯಮಾವಳಿಗಳಿಗೆ ಇಬ್ಬರೂ ಒಳಪಡುತ್ತಾರೆ ಮತ್ತು ಇದು ಸಾಲ ಕೊಡುವ ಮತ್ತು ಪಡೆಯುವ ರೀತಿಯನ್ನು ವಿಧಿಸುತ್ತದೆ.ವಿಧಿಸಲಾದ ರೀತಿಯನ್ನು ಅನುಸರಿಸಲಾಯಿತು ಎಂಬುದನ್ನು ತೋರಿಸಲು ಅಭಿಲೇಖವು ಏನನ್ನು ಹೊಂದಿರುವುದಿಲ್ಲ.ಫಿರ್ಯಾದುದಾರನು, ತನ್ನ ಆದಾಯದ ಮೂಲ ತನ್ನ ಸಂಬಳದ ಉಳಿತಾಯ ಮತ್ತು ತನಗೆ ಸೇರಿದ ಸರ್ವೆ ನಂ. 45 ರಲ್ಲಿರುವ ನಿವೇಶನವನ್ನು ಮಾರಿದ್ದರಿಂದ 5 ಲಕ್ಷ ರೂಪಾಯಿಗಳನ್ನು ಪಡೆದನು ಎಂದು ಕ್ಲೇಮು ಮಾಡಿದ್ದಾನೆ.ನಿವೇಶನ ಸಂಖ್ಯೆ 45 ಕ್ಕೆ ಸಂಬಂಧಿಸಿದಂತ ಮಾರಾಟ ಬೆಲೆಗೆ ಸಂಬಂಧಿಸಿದಂತೆ ಯಾವುದೇ ದೃಢಕ್ತಿಯು ದೂರಿನಲ್ಲಾಗಲಿ ಅಥವಾ ಫಿರ್ಯಾದುದಾರನ ಪಾಟೀ ಸವಾಲಿನಲ್ಲಾಗಲಿ ಇರುವುದಿಲ್ಲ.ಸಂಬಂಧಿಸಿದ ಕ್ರಯಪತ್ರವನ್ನೂ ಸಹ ಹಾಜರುಪಡಿಸಿರುವುದಿಲ್ಲ.ಫಿರ್ಯಾದುದಾರನು, ಆದಾಯ ತೆರಿಗೆ ಕರದಾತನಾಗಿದ್ದರೂ ಸಹ, ತನ್ನ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ನಿವೇಶನಸಂಖ್ಯೆ: 45 ನ್ನು ಮಾರಾಟ ಮಾಡಿದ್ದ ಬಗ್ಗೆ ಘೋಷಿಸಿರುವುದಿಲ್ಲವೆಂದು ತನ್ನ ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾನೆ.ಇದಕ್ಕೆ ಪ್ರತಿಯಾಗಿ, 1997 ನೇ ಇಸವಿಯಲ್ಲಿ ಎಲ್‌ಐಸಿಯಿಂದ 1,49,205/- ರೂಪಾಯಿಗಳನ್ನು ಸಾಲ ಪಡೆದಿರುವುದಾಗಿ ಫಿರ್ಯಾದುದಾರನು ತನ್ನ ಸಾಕ್ಷ್ಯದಲ್ಲಿ ಒಪ್ಪಿಕೊಂಡಿರುತ್ತಾನೆ.ಆಪಾದಿತ ಸಾಲವಾದ 14 ಲಕ್ಷ ರೂ.ಗಳನ್ನು 1997 ನೇ ಇಸವಿಯಲ್ಲಿ ನೀಡಲಾಯಿತು

ಎಂದು ಕ್ಲೇಮು ಮಾಡಿರುವುದನ್ನು ಗಮನಿಸುವುದು ಸಮಂಜಸವಾಗಿರುತ್ತದೆ.ಮುಂದುವರಿದು, ಫಿರ್ಯಾದುದಾರನು, ತನ್ನ ಕ್ಲೇಮನ್ನು ರುಜುವಾತುಪಡಿಸಲು ಬ್ಯಾಂಕ್ ಲೆಕ್ಕ ವಿವರಣೆಯನ್ನು ಹಾಜರುಪಡಿಸಿರುವುದಿಲ್ಲ.ಅಧಿವಿಚಾರಣಾ ನ್ಯಾಯಾಲಯವು, ಎನ್.ಐ ಅಧಿನಿಯಮದ 138 ನೇ ಪ್ರಕರಣದ ಅಡಿಯಲ್ಲಿ ಉದ್ಭವಗೊಂಡ ಮತ್ತೊಂದು ಕ್ರಿಮಿನಲ್ ಮೊಕದ್ದಮೆಯಲ್ಲಿ ಫಿರ್ಯಾದುದಾರನ ಪತ್ನಿಯ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡಿದ್ದು, ಇದರಲ್ಲಿ ಪತ್ನಿಯು, ಪ್ರಸ್ತುತ ಅಪೀಲುದಾರ/ಆಪಾದಿತನು ತನ್ನ ಪತಿಯಿಂದ ಯಾವುದೇ ಸಾಲವನ್ನು ಪಡೆದುಕೊಂಡಿಲ್ಲವೆಂದು ಹೇಳಿಕೆ ನೀಡಿರುತ್ತಾಳೆ.ಸಂಪೂರ್ಣವಾದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿದ ಮೇಲೆ ಆಪಾದಿತನಿಗೆ 14 ಲಕ್ಷ ರೂ.ಗಳನ್ನು ನೀಡಲು ಫಿರ್ಯಾದುದಾರನಿಗೆ ಯಾವುದೇ ಆದಾಯ ಮೂಲವಿರಲಿಲ್ಲ ಮತ್ತು ಆಪಾದಿತನಿಂದ ತನಗೆ ಕಾನೂನುಬದ್ಧವಾಗಿ ವಸೂಲಿ ಮಾಡಬಹುದಾದ ಸಾಲವಿದೆಯೆಂಬುದನ್ನು ರುಜುವಾತು ಪಡಿಸಲು ವಿಫಲರಾಗಿದ್ದಾರೆ ಎಂದು ಎಂದು ಅಧಿವಿಚಾರಣಾ ನ್ಯಾಯಾಲಯವು ನಿರ್ಣಯಿಸಿರುತ್ತದೆ.

12. ಪ್ರಸ್ತುತ ಮೊಕದ್ದಮೆಯಲ್ಲಿ, ಮಾನ್ಯ ಅಧೀನ ನ್ಯಾಯಾಲಯವು, ವರದಿಯಾದ ರಂಗಪ್ಪ ವಿರುದ್ಧ-ಶ್ರೀ ಮೋಹನ್- (2010) 11 ಎಸ್ಸಿಸಿ 441, ಮೊಕದ್ದಮೆಯಲ್ಲಿ ತ್ರಿಸದಸ್ಯ ಪೀಠವು ನೀಡಿದ ತೀರ್ಪಿನ ಮೇಲೂ ಅವಲಂಬಿತವಾಗಿದ್ದು, ಎನ್.ಐ ಅಧಿನಿಯಮದ 139 ನೇ ಪ್ರಕರಣದಲ್ಲಿ ಆದೇಶಿಸಲಾದ ಪೂರ್ವ ಭಾವನೆಯು, ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಸಾಲ ಅಥವಾ ಹೊಣೆಗಾರಿಕೆಯು ಅಸ್ತಿತ್ವದಲ್ಲಿರುತ್ತದೆಂದು ಮತ್ತು ಅದು ಒಂದು ಖಂಡನೀಯವಾದ ಪೂರ್ವಭಾವನೆಯೆಂದು ಮತ್ತು ಅದರಲ್ಲಿ 0 ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಸಾಲ ಅಥವಾ ಹೊಣೆಗಾರಿಕೆಯ ಅಸ್ತಿತ್ವದ ಬಗ್ಗೆ ವಾದ ಮಂಡಿಸಬಹುದೆಂಬ ಪೂರ್ವಭಾವನೆಯನ್ನು ಒಳಗೊಂಡಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

13. ಪ್ರಸ್ತುತ ಮೊಕದ್ದಮೆಯಲ್ಲಿ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 139 ನೇ ಪ್ರಕರಣದೊಂದಿಗೆ ಬದಲಾದ 118 ನೇ ಪ್ರಕರಣದ ಅಡಿಯಲ್ಲಿನ ಪೂರ್ವ ಭಾವನೆಯು ಫಿರ್ಯಾದುದಾರನ ಪರವಾಗಿದ್ದರೂ ಸಹ, ಫಿರ್ಯಾದುದಾರನ ಪರವಾಗಿ ಲಭ್ಯವಿರುವ ಪೂರ್ವಭಾವನೆಯನ್ನು ಆಪಾದಿತನು ಖಂಡಿಸುವ ಅಗತ್ಯವಿರುತ್ತದೆ ಆಪಾದಿತನು ಸಾಕ್ಷ್ಯವನ್ನು ನೀಡುವ ಮೂಲಕ ಸಾಕ್ಷ್ಯ ಎ ಕಟಕಟೆಗೆ ಬರುವ ಅಗತ್ಯವಿರುವುದಿಲ್ಲ.ಆದರೆ ಪಾಟಿ ಸವಾಲಿನಲ್ಲಿ ಆಪಾದಿತನು ಫಿರ್ಯಾದುದಾರನ ಸಾಕ್ಷ್ಯವನ್ನು ಖಂಡಿಸಬಹುದಾಗಿದೆ.ಈ ಮೊಕದ್ದಮೆಯಲ್ಲಿ, ಅಪೀಲುದಾರ ಫಿರ್ಯಾದುದಾರನ ಪರವಾಗಿ ಅಸ್ತಿತ್ವದಲ್ಲಿರುವ ಪೂರ್ವಭಾವನೆ ಮತ್ತು ಆಪಾದಿತನು ಕಾನೂನಾತ್ಮಕವಾಗಿ ವಸೂಲಿ ಮಾಡಬಹುದಾದ ಸಾಲವನ್ನು ಪಾವತಿಸಬೇಕೆಂಬುದಕ್ಕೆ ಸಂಬಂಧಿಸಿದ ಪ್ರಾ.ಸಾ.1 ರ ಸಾಕ್ಷ್ಯವನ್ನು ಆಪಾದಿತನು ನಿರಾಕರಿಸಿರುತ್ತಾನೆ.

14. ಆದ್ದರಿಂದ, ಅಪೀಲುದಾರ/ಫಿರ್ಯಾದುದಾರನು ತನ್ನ ಆದಾಯದ ಮೂಲ ಮತ್ತು ಪಾವತಿಸುವ ಸಾಮರ್ಥ್ಯವನ್ನು ತೋರಿಸಲು ಅಸಮರ್ಥನಾಗಿರುವುದರಿಂದ ಮತ್ತು ಫಿರ್ಯಾದುದಾರನ ಸಾಕ್ಷ್ಯದಲ್ಲಿ ಚೆಕ್ಕನ್ನು ನೀಡಿರುವ ದಿನಾಂಕವು ಅನುಮಾನ ಹುಟ್ಟಿಸಿರುವುದರಿಂದ, ಆಪಾದಿತನಿಂದ ಕಾನೂನಾತ್ಮಕವಾಗಿ ವಸೂಲಿ ಮಾಡಬಹುದಾದ ಸಾಲವಿದೆಯೆಂದು ಮತ್ತು ಫಿರ್ಯಾದುದಾರನಿಗೆ ಆಪಾದಿತನು ಸಾಲವನ್ನು ತೀರಿಸುವ ಸಲುವಾಗಿ ಚೆಕ್ಕನ್ನು ನೀಡಿದನೆಂಬ ಫಿರ್ಯಾದುದಾರನ ಸಾಕ್ಷ್ಯವನ್ನು ಒಪ್ಪಲು ಸಾಧ್ಯವಿರುವುದಿಲ್ಲ.

15. ಆಪಾದಿತ ಪರ ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದ ಮಂಡಿಸುವುದೇನೆಂದರೆ, ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲೂ ಸಹ, ಫಿರ್ಯಾದುದಾರನು ಆಪಾದಿತನಿಗೆ ಸಾಲದ ಮೊತ್ತವನ್ನು ನಿಜವಾಗಿ ನೀಡಿದನು ಎಂಬುದರ ಬಗ್ಗೆ ಸ್ಪಷ್ಟವಾದ ದೃಢಕ್ತಿಗಳಿರುವುದಿಲ್ಲ.ಅದನ್ನೇ ಪಾಟಿ ಸವಾಲಿನಲ್ಲಿ ಸೂಚಿಸಲಾಯಿತು ಮತ್ತು ಪ್ರಾ.ಸಾ .1 ಫಿರ್ಯಾದುದಾರನನ್ನು ಅಲ್ಲಗಳೆಯಲಾಯಿತು. ದೂರು ಮತ್ತು ಮುಖ್ಯ ವಿಚಾರಣೆಯನ್ನು ಅವಗಾಹಿಸಿದ ತರುವಾಯ, ಅದರಲ್ಲಿ ಆಪಾದಿತನು ಸಾಲವನ್ನು ಪಡೆಯಲು ಫಿರ್ಯಾದುದಾರನನ್ನು ಸಂಪರ್ಕಿಸಿದನು ಮತ್ತು ಆತನು ಸದರಿ ಮೊತ್ತವನ್ನು ಆಪಾದಿತನಿಗೆ ಸಾಲ ನೀಡಲು ಒಪ್ಪಿದನು ಮತ್ತು ಆಪಾದಿತನು ಅದನ್ನು ಮರು ಪಾವತಿಸಲು ಒಪ್ಪಿದನು ಎಂದು ಹೇಳಲಾಗಿದೆ.ದೂರು ಮತ್ತು ಮುಖ್ಯ ವಿಚಾರಣೆಯಲ್ಲಿ ಮಾಡಲಾದ ದೃಢಕ್ತಿಗಳಲ್ಲಿ ವಿರೋಧಾಭಾಸವಿರುತ್ತದೆ.ಫಿರ್ಯಾದುದಾರನ ಮುಖ್ಯ ವಿಚಾರಣೆಯ ಉದ್ಧೃತ ಭಾಗವು ಈ ಕೆಳಗಿನಂತಿದೆ:

"ನಾನು ನಿವೇದಿಸುವುದೇನೆಂದರೆ, ಆಪಾದಿತ ಮತ್ತು ನಾನು ಹಲವು ವರ್ಷಗಳ ಹಿಂದಿನಿಂದ ಕುಟುಂಬ ಸ್ನೇಹಿತರಾಗಿದ್ದು, ಆ ಪರಿಚಯದಿ ಂ ದ ಆಪಾದಿತನು ಹಣಕಾಸಿನ ಸಹಾಯಕ್ಕೋಸ್ಕರ 2008 ರ ಏಪ್ರಿಲ್

ತಿಂಗಳಿನಲ್ಲಿ ನನ್ನನ್ನು ಸಂಪರ್ಕಿಸಿದನು ಮತ್ತು ತನ್ನ ಹಣಕಾಸಿನ ತೊಂದರೆಯನ್ನು ನನ್ನ ಬಳಿ ಹೇಳಿ, 5 ಅಥವಾ 6 ತಿಂಗಳ ಅವಧಿಗೆ 1,00,000/- ರೂ.ಗಳ ಕೈಸಾಲವನ್ನು ನೀಡುವಂತೆ ನನ್ನನ್ನು ವಿನಂತಿಸಿಕೊಂಡನು ಮತ್ತು ಸ್ನೇಹವನ್ನು ಪರಿಗಣಿಸುತ್ತಾ, ನಾನು 2008 ರ ಏಪ್ರಿಲ್ ತಿಂಗಳಿನಲ್ಲಿ ಆತನಿಗೆ 1,00,000/- ರೂ.ಗಳ ಸಾಲವನ್ನು ನೀಡಲು ಒಪ್ಪಿಕೊಂಡೆನು ಮತ್ತು ಆಪಾದಿತನು ಸದರಿ ಕೈಸಾಲವನ್ನು ಪಡೆಯುವ ಸಂದರ್ಭದಲ್ಲಿ, ಸದರಿ ಮೊತ್ತವನ್ನು 5 ತಿಂಗಳುಗಳೊಳಗೆ ಮರು ಪಾವತಿ ಮಾಡುವುದಾಗಿ ಹೇಳಿದ್ದನು.

16. ದೂರಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಮಾಡಲಾದ ದೃಢಕ್ತಿಗಳನ್ನು ಅವಗಾಹಿಸಿದ ತರುವಾಯ, ಫಿರ್ಯಾದುದಾರನು ಆಪಾದಿತನಿಗೆ ಯಾವ ದಿನಾಂಕದಂದು ಹಣವನ್ನು ನೀಡಿದನು ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿಯಿರುವುದಿಲ್ಲ.ಫಿರ್ಯಾದುದಾರನು ಆಪಾದಿತನಿಗೆ ಕೈಸಾಲವಾಗಿ 2008 ರ ಏಪ್ರಿಲ್ ತಿಂಗಳಿನಲ್ಲಿ 1,00,000/-ರೂಪಾಯಿಗಳನ್ನು ನೀಡಲು ಒಪ್ಪಿದನು ಎಂದು ಮಾತ್ರ ಹೇಳಲಾಗಿದ್ದು, ಆತನು ಯಾವ ದಿನಾಂಕದಂದು ಹಣವನ್ನು ನಿಜವಾಗಿ ನೀಡಿದನು ಎಂಬುದರ ಬಗ್ಗೆ ಹೇಳಿರುವುದಿಲ್ಲ.ಆದರೆ, ಸಾಲವನ್ನು ಪಡೆಯುವ ಸಂದರ್ಭದಲ್ಲಿ ಆಪಾದಿತನು ಸದರಿ ಮೊತ್ತವನ್ನು 6 ತಿಂಗಳೊಳಗಾಗಿ ಮರು ಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದನು ಎಂಬುದನ್ನು ಮಾತ್ರ ಫಿರ್ಯಾದುದಾರನು ಹೇಳಿರುತ್ತಾನೆ.ವಾಕ್ಯ ರಚನೆಯಲ್ಲಿ ಕೆಲವು ವ್ಯತ್ಯಾಸವಿರಬಹುದು, ಆದಾಗ್ಯೂ, ಫಿರ್ಯಾದುದಾರನು ಆಪಾದಿತನಿಗೆ ಯಾವ ದಿನಾಂಕದಂದು ಹಣವನ್ನು ನೀಡಿದನು ಎಂಬುದರ ಬಗ್ಗೆ ಸ್ಪಷ್ಟವಾಗಿ ಹೇಳಿರುವುದಿಲ್ಲ.ಆದ್ದರಿಂದ, ಈ ಆಧಾರದ ಮೇಲೂ ಸಹ ಫಿರ್ಯಾದುದಾರನು ಆಪಾದಿತನಿಗೆ ಸಾಲದ ಮೊತ್ತವನ್ನು ಯಾವ ದಿನಾಂಕದಂದು ನೀಡಿದನು ಎಂಬುದನ್ನು ತೋರಿಸಲು ಅಸಮರ್ಥನಾಗಿರುತ್ತಾನೆ.ಆದ್ದರಿಂದ, ಫಿರ್ಯಾದುದಾರನು ಆಪಾದಿತನಿಗೆ ನಿಜವಾಗಿಯೂ ಸಾಲವನ್ನು ನೀಡಿದ್ದಾರೆ ಮತ್ತು ಸದರಿ ಸಾಲವನ್ನು ತೀರಿಸುವಲ್ಲಿ ಮತ್ತು ಕಾನೂನಾತ್ಮಕವಾಗಿ ವಸೂಲಿ ಮಾಡುವ ಸಾಲವನ್ನು ತೀರಿಸಲು ಆಪಾದಿತನು ಚೆಕ್ಕನ್ನು ನೀಡಿದ್ದಾನೆ ಎಂಬ ಫಿರ್ಯಾದುದಾರನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

17. ಮೊದಲ ಅಪೀಲು ನ್ಯಾಯಾಲಯವು, ಅಭಿಲೇಖದಲ್ಲಿನ ಸಾಕ್ಷ್ಯವನ್ನು, ಮರು ಪರಿಶೀಲಿಸಿದ್ದು, ಆಪಾದಿತನ ವಾದವನ್ನು ಒಪ್ಪಿಕೊಂಡು ಆಪಾದಿತನನ್ನು ಖುಲಾಸೆಗೊಳಿಸಿರುವುದು ಸೂಕ್ತವಾಗಿದ್ದು, ಆದರೆ ಅಧಿವಿಚಾರಣಾ ನ್ಯಾಯಾಲಯವು ಆ ಅಂಶಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ಪರಿಗಣಿಸಿರುವುದಿಲ್ಲ.ಆದ್ದರಿಂದ, ನಾವು, ಮೊದಲ ಅಪೀಲು ನ್ಯಾಯಾಲಯವು ಹೊರಡಿಸಿದ ಖುಲಾಸೆ ತೀರ್ಪನ್ನು ಎತ್ತಿ ಹಿಡಿದಿದ್ದು, ಅದು ಯಾವುದೇ ಹಸ್ತಕ್ಷೇಪವನ್ನು ಬಯಸುವುದಿಲ್ಲ.ಆದ್ದರಿಂದ, ನಾವು ಈ ಮುಂದಿನಂತೆ ಆದೇಶಿಸಲು ಮುಂದುವರಿಯುತ್ತೇವೆ.

ಆದೇಶ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಮತ್ತು ತ್ವರಿತಗತಿ ನ್ಯಾಯಾಲಯ -IV ಕ್ರಿಮಿನಲ್ ಅಪೀಲುಸಂಖ್ಯೆ: 500/2009 ರಲ್ಲಿದಿನಾಂಕ: 5.5.2010 ರಂದು ಹೊರಡಿಸಿದ ತೀರ್ಪು ಮತ್ತು ಖುಲಾಸೆಯ ಆದೇಶವನ್ನು ಈ ಮೂಲಕ ಸಿರೀಕರಿಸಲಾಗಿದೆ.

ತೀರ್ಪಿನ ಪ್ರತಿ ಮತ್ತು ಎಲ್‌ಸಿಆರ್ ಅನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಕೂಡಲೇ ಕಳುಹಿಸತಕ್ಕದ್ದು.